ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ

C. C. No.839/2022

CW.3-PW.2

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:-ದಿನಾಂಕ: 24.08.2024

| | |
|---|---|
| ಸಾಕ್ಷಿಯ ಹೆಸರು:- | ಶಿವರಾಜ್ |
| ತಂದೆ ಹೆಸರು :- | ಶಂಕರ |
| ವಯಸ್ಸು:- | 37 ವರ್ಷ |
| ಉದ್ಯೋಗ :- | ಚಾಲಕ |
| ವಾಸ ಸ್ಥಳ :- | ರಾಜೋಳಾ ಗ್ರಾಮ, ತಾ. ಬಸವಕಲ್ಯಾಣ |

<u>ಮುಖ್ಯ ವಿಚಾರಣೆ</u>**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ.2 ಇವರು ಪರಿಚಯ ಇರುತ್ತಾರೆ. ಸಾಕ್ಷಿ ದಿನಾಂಕ 10.05.2022 ರ ಪಂಚನಾಮೆಯಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ದಿನಾಂಕ 05.10.2022 ರಂದು ರಾಜೋಳಾದ ಹುಮನಾಬಾದ ರಸ್ತೆಯಲ್ಲಿ ಬೆಳಗ್ಗೆ 11.00 ಗಂಟೆಗೆ ಪೋಲಿಸರು ಬಂದು ನಮ್ಮ ಸಹಿ ಪಡೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.2 ಇವರು ಸಹ ಇದ್ದರು. ನನ್ನ ಸಮಕ್ಷಮ ಪೋಲಿಸರು ಏನನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ನಿಪಿ.2 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಲು ಎ.ಪಿ.ಪಿ., ರವರು ಅನುಮತಿ ಕೋರಿರುತ್ತಾರೆ, ಆ ಪ್ರಕಾರ ಅನುಮತಿ ನೀಡಲಾಯಿತು.

<u>ಪಾಟೀ ಸವಾಲು</u> **:-**ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿನಾಂಕ 10.05.2022 ರಂದು ಬೆಳಗ್ಗೆ 10.00 ರಿಂದ 11.00 ಗಂಟೆವರೆಗೆ ರಾಜೋಳಾ ಗ್ರಾಮದ ಅಂಬೇಡ್ಕರ್ ಚೌಕಿನ ಬದಿಯಲ್ಲಿರುವ ಚಾಸಾ.1 ಇವರ ಹೋಟೆಲ್ ಮುಂದಿನ ರಾಜೋಳಾ-ಹುಣಸಗೇರಾ ರಸ್ತೆಯ ಮೇಲೆ ಜಗಳಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನ ಮತ್ತು ಚಾಸಾ.2 ಇವರ ಸಮಕ್ಷಮ ನಿಪಿ.2 ರಂತೆ ಪಂಚನಾಮೆ ಬರೆದು, ಓದಿ ಹೇಳಿ ನ್ಯಾಯಾಲಯದ ಮುಂದಿರುವ ಆರು ಬಡಿಗೆಗಳನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-